IJRAR.ORG E-ISSN: 2348-1269, P-ISSN: 2349-5138

INTERNATIONAL JOURNAL OF RESEARCH AND ANALYTICAL REVIEWS (IJRAR) | IJRAR.ORG

An International Open Access, Peer-reviewed, Refereed Journal

# ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಯ ಸ್ತ್ರೀ ಪಾತ್ರಗಳು

ಡಾ. ಸುರೇಶ ಕೆ.ಸಿ
ಸಹ ಪ್ರಾಧ್ಯಾಪಕರು
ಕೆ.ಎಲ್.ಇ ಸಂಸ್ಥೆಯ
ಎಸ್. ನಿಜಲಿಂಗಪ್ಪ ಕಾಲೇಜು
ಬೆಂಗಳೂರು–560010

ಪ್ರತಿಯೊಂದು ಹೆಣ್ಣು; ಪುರುಷ ನಿರ್ಮಿತ ವ್ಯವಸ್ಥೆಯುಳ್ಳ ಭಾರತದಂತಹ ಸಮಾಜದಲ್ಲಿ ತನ್ನ ಜೀವಿತಾವಧಿಯಲ್ಲಿ ಎದುರಿಸುವ ಮಾನಸಿಕ ಮತ್ತು ದೈಹಿಕ ದೌರ್ಜನ್ಯ ಶೋಷಣೆಗಳಿಂದಾಗಿ ಒಬ್ಬ ಮಹಿಳೆಯ ವ್ಯಕ್ತಿತ್ವದಲ್ಲಾಗುವ ಬದಲಾವಣೆಯನ್ನು ಕಾದಂಬರಿಯ ಸ್ತ್ರೀ ಪಾತ್ರಗಳ ಮೂಲಕ ಗುರುತಿಸಬಹುದು.

ಪುರುಷ ವ್ಯವಸ್ಥೆಯ ಕಣ್ಕಟ್ಟಿನಲ್ಲಿರುವ ಡಾ. ಚಂದ್ರಶೇಖರ ಕಂಬಾರರು ತಮ್ಮ ಕಾದಂಬರಿಯಾದ 'ಸಿಂಗಾರೆವ್ವ ಮತ್ತು ಅರಮನೆ'ಯಲ್ಲಿ ಹೊರನೋಟಕ್ಕೆ ಸ್ತ್ರೀ ಬದುಕಿನ ಮಾನಸಿಕ ತೊಳಲಾಟವನ್ನು ಬಿಚ್ಚಿಟ್ಟು, ಸ್ತ್ರೀಯ ಸಮಸ್ಯೆಗಳನ್ನು ತಿಳಿಸಿದರೂ ಸಹ ಸೂಕ್ಷ್ಮವಾಗಿ ಕಂಬಾರರು ಕಾದಂಬರಿಯ ಸ್ತ್ರೀ ಪಾತ್ರದ ಮೂಲಕ ಪುರುಷ ಸಮಾಜವನ್ನು ಓಲೈಸುವಂತೆ ಗೋಚರವಾಗುತ್ತದೆ.

ಕಾದಂಬರಿಯಲ್ಲಿ ಕಂಡುಬರುವ ಪ್ರಮುಖ ಸ್ತ್ರೀ ಪಾತ್ರಗಳೆಂದರೆ

ಕುಮುದವ್ವ
ಸಿಂಗಾರೆವ್ವ
ಶೀನಿಂಗಿ

ಭಾರತೀಯ ಸಮಾಜ ಮತ್ತು ಕುಟುಂಬ ಪುರುಷ ಪ್ರಾಧಾನ್ಯತೆ ಹೊಂದಿರುವಂಥದ್ದು. ಆದ್ದರಿಂದಲೇ ಗಂಡಸಿನ ಯಜಮಾನ್ಯವನ್ನು ಬಲವಂತವಾಗಿ ಮತ್ತು ಅಸಹಾಯಕತೆಯಿಂದ ಸ್ತ್ರೀ ಸಮುದಾಯ ಒಪ್ಪಿಕೊಂಡಿದೆ. ಇಲ್ಲಿ ಗಂಡಸಿನದೇ ಅಂತಿಮ ತೀರ್ಮಾನ. ಈ ಹಿನ್ನೆಲೆಯಲ್ಲಿ ಸಿಂಗಾರೆವ್ವನ ಪಾತ್ರವನ್ನು ಕೇಂದ್ರವಾಗಿಟ್ಟುಕೊಂಡು ನೋಡಿದಾಗ ಕಾದಂಬರಿಯಲ್ಲಿ ಲಿಂಗಾಧಾರಿತ ಯಾಜ್ಯಮಾನ್ಯಗಳ ನಿಷ್ಕರುಣೆ, ದೌರ್ಜನ್ಯ, ನಿರ್ವೀಯ, ಅಮಾನವೀಯ ಜೀವನ ಕ್ರಮಗಳನ್ನು ದಾಖಲಿಸುತ್ತದೆ. ಮಹಿಳೆಯ ದೇಹವನ್ನು ಲೈಂಗಿಕ ಬಳಕೆ ಹಾಗೂ ದುರ್ಬಳಕೆಗಾಗಿ ಇರುವ ಸರಕೆಂಬಂತೆ ಬಳಸಿಕೊಳ್ಳಲಾಗಿದೆ.

ಕಾದಂಬರಿಯು ಹೊರನೋಟಕ್ಕೆ ಪುರುಷ ಪಾತ್ರಗಳ ದಬ್ಬಾಳಿಕೆಯ ವಿರುದ್ಧ ತನ್ನ ಧ್ವನಿಯನ್ನು ಎತ್ತಿ ಹಿಡಿದಿದೆ ಎಂದು ಭಾಸವಾಗುತ್ತದೆ. ಆದರೆ ಇಲ್ಲಿ ಸ್ತ್ರೀ ಪರ ಕಾಳಜಿಗಿಂತ ಪುರುಷ ಪ್ರಧಾನವಾಗಿರುವ ಮತ್ತು ಸ್ತ್ರೀಗೆ ವಿರುದ್ಧವಾಗಿರುವ ಮೌಲ್ಯಗಳಾದ ಪಾತಿವ್ರತ್ಯ , ಕ್ಷಮಾಗುಣ, ತಾಯ್ತನದ ತುಡಿತ, ನಿಗೂಢತೆ, ಕಾಮ ರಹಿತ ಸ್ಥಿತಿಗಳನ್ನು ಒಪ್ಪಿಕೊಂಡಂತಿದೆ.

ಸಿಂಗಾರೆವ್ವನ ಸುತ್ತ ಹೆಣೆದಿರುವ ಪುರುಷ ಪಾತ್ರಗಳು ಸಿಂಗಾರೆವ್ವನ ಮೇಲೆ ನಡೆಸುವ ದೌರ್ಜನ್ಯಗಳನ್ನು ಗಮನಿಸುವುದಾದರೆ ಆಕೆಯ ತಂದೆ ಪಂಡರೀಗೌಡ ಗಂಡು ಸಂತಾನಕ್ಕಾಗಿ ನಾಲ್ಕು ಸ್ತ್ರೀಯರನ್ನು ವಿವಾಹವಾಗುವುದು ಪಾಪ ಎನಿಸದೇ ಇರದು. ಮತ್ತು ಹಣಕ್ಕಾಗಿ ಮಗಳನ್ನು ನಿಷ್ಕರುಣೆಯಿಂದ ನಡೆಸಿಕೊಂಡವನು. ಅಪ್ಪನ ದುರಾಸೆಗೆ ಬಲಿಯಾಗುವ ಮಗಳಾದ ಸಿಂಗಾರೆವ್ವಳಿಗೆ ಒಂದು ಹೆಣಕ್ಕೆ ಮದುವೆಯನ್ನು ಮಾಡುತ್ತಾರೆ. ಕಾರಣ ಆ ಗಂಡು ಸಾಯುವ ಕೊನೆಗಳಿಗೆಯಲ್ಲಿದ್ದು, ಆತ ಸತ್ತ ನಂತರ ಆ ಮನೆತನದ ಆಸ್ತಿ ಸತ್ತವನ ಹೆಂಡತಿಗೆ ಬರುವುದೆಂಬ ಆಸೆಗೆ ತನ್ನ ಮಗಳನ್ನೇ

ಬಲಿಕೊಡುವ ಅಪ್ಪ; ನಂತರದ ಎರಡನೇ ಮದುವೆಯೂ ರೋಗಿಷ್ಠ, ಗಂಡಸಲ್ಲದ ಗಂಡಸಾದ ದೇಸಾಯಿಗೆ ಮಾಡುವನು. ಆ ದೇಸಾಯಿಗೆ ಹಲವಾರು ರೋಗಗಳು. ಆತ ಹೆಂಗಸರ ತೊಡೆ ನೋಡಿದರೇನೇ ಮೂರ್ಛೆ ಬೀಳುವ ಆಸಾಮಿ, ಆದರೂ ಹೆಂಗಸರ ತೊಡೆನೋಡಲು ಪರಿತಪಿಸುವಾತ. ಮದುವೆ ಮಾಡಿಕೊಂಡ ಹೆಂಡತಿಗೆ ಒಮ್ಮೆ ನೋಡಿದವನಲ್ಲ, ಆಕೆಯೊಂದಿಗೆ ಪ್ರೀತಿಯಿಂದ ಮಲಗಿದವನಲ್ಲ, ಆಕೆಯ ಯೋಗಕ್ಷೇಮ ಒಮ್ಮೆಯೂ ವಿಚಾರಿಸಿದವನಲ್ಲ. ತನ್ನ ಹೆಂಡತಿಗೂ ಒಂದು ಜೀವವಿದೆ, ಆಕೆಗೂ ಒಂದು ಮನಸ್ಸಿದೆ, ಆಕೆಗೂ ಭಾವನೆಗಳಿವೆ–ಬಯಕೆಗಳಿವೆ ಎಂದು ಯೋಚಿಸೋದಂತೂ ದೂರದಮಾತು. ಅಮಾನವೀಯ ಮತ್ತು ನಿರ್ವೀರ್ಯತೆಯಿಂದ ಬಳಲುತ್ತಿದ್ದ ಒಮ್ಮೆಯೂ ಹೆಂಡತಿಯನ್ನು ಪ್ರೀತಿಯಿಂದ ಕಾಣದವನು. ಇತ್ತ ವಯಸ್ಸಿನಲ್ಲಿ ನೂರರ ಸನಿಹದಲ್ಲಿದ್ದ ಸಿಂಗಾರೆವ್ವಳ ಅತ್ತೆ; ಮೊಮ್ಮಗನನ್ನು ಕಂಡು ಅದರ ಉಚ್ಚೆಯನ್ನು ಕುಡಿದೇ ಸಾಯುತ್ತೇನೆನ್ನುವ ಆಕೆಯ ಬಯಕೆ ಒಂದು ಕಡೆ. ಈ ಕತೆಯನ್ನು ಹೇಳುವ ಶೀನಿಂಗಿ ಮತ್ತು ಸಿಂಗಾರೆವ್ವ ಗೆಳತಿಯರು ಈ ಕತೆಗೆ, ಕತೆಯಲ್ಲಿನ ಪ್ರೀತಿಗೆ, ಕ್ರೌರ್ಯಕ್ಕೆ ಈಕೆಯೇ ಜೀವಂತ ದಂತಕತೆ.

ಸ್ವತಃ ತಾನೇ ವೇಶ್ಯೆಯ ತೊಡೆ ನೋಡಿ ಹಾದರ ಮಾಡುತ್ತಿದ್ದರೂ ಹೆಂಡತಿ ಬಸಿರಾದುದ್ದಕ್ಕೆ' ಥೂ ಹಾದರಗಿತ್ತಿ' ಎನ್ನುವವನು. ಸ್ವತಃ ಮನುಷ್ಯತ್ವ ಇಲ್ಲದೆ ದೇಸಾಯಿ ಕೊನೆಗೆ ತಾನು ಸಾಯುವಾಗ ಪತ್ರದಲ್ಲಿ ಸಿಂಗಾರೆವ್ವನ ಕುರಿತು" ಕೊಂಚವಾದರೂ ಮನುಷ್ಯತ್ವವಿದ್ದರೆ ನನ್ನನ್ನು ನೀವೇ ಕೈಯಾರೆ ಕೊಂದವೆಂದು ಕೋರ್ಟಿನಲ್ಲಿ ಜವಾಬು ಹೇಳಿ ಜೈಲಿಗೆ ಹೋಗಬೇಕೆಂಬುದು ನನ್ನ ಅಂತಿಮ ಆಸೆ "ಎಂದು ಬರೆದಿರುತ್ತಾನೆ.

ಜಂಗಮ ಹುಚ್ಚಯ್ಯನ ಪಾತ್ರವು ದೇವರ ಹೆಸರಿನಲ್ಲಿ ಹೆಣ್ಣನ್ನು ಮಾಡಿಸುವ ಕಾಮ ಪಿಶಾಚಿ. ಈತನಿಗೆ ಮಹಿಳೆ ಕಾಮದ ವಸ್ತು ಮಾತ್ರ ಆಗಿದ್ದಾಳೆ. ಈತ ತನ್ನ ಮಾಂತ್ರಿಕ ಶಕ್ತಿಯಿಂದ ಹೆಣ್ಣು ಮಕ್ಕಳನ್ನು ಒಲಿಸಿಕೊಳ್ಳುತ್ತಿದ್ದ. ಅದೂ ಹೆಣ್ಣು ಮಕ್ಕಳ ಅನುಮತಿ ಇಲ್ಲದೆ ಸಿಂಗಾರೆವ್ವನಿಗೆ" ಉಂಟು ಮಕ್ಕಳ ಫಲ ಉಂಟು! ನಿನಗ ಮಕ್ಕಳ ಕೊಡದಿದ್ದರ ಶಿವನ ಪಾದ ತಿರುವತೀನಿ! " ಎಂದು ಮಕ್ಕಳ ಆಸೆ ಹುಟ್ಟಿಸುತ್ತಾನೆ. ಈತನ ಮಾಯ ಮಾಟಕ್ಕೆ ಪರವಶಳಾಗಿ ಸಿಂಗಾರೆವ್ವ ಹುಚ್ಚಯ್ಯನ ಕಾಮುಕತೆಗೆ ಬಲಿಯಾಗುತ್ತಾಳೆ. ಮರ್ ಸಿಂಗಾರೆವ್ವನ ತಂದೆಯ ಮೇಲಿನ ದ್ವೇಷ ಸಾಧನೆಗಾಗಿ ಸಿಂಗಾರೆವ್ವನ ಮೇಲೆ ನಿರಂತರ ಲೈಂಗಿಕ, ದೈಹಿಕ ದೌರ್ಜನ್ಯವೆಸಗುತ್ತಲೇ ಬರುತ್ತಾನೆ.

ಹೀಗೆ ಮೇಲ್ನೋಟಕ್ಕೆ ಕಂಬಾರರ ಕಾದಂಬರಿಯಲ್ಲಿ ಸ್ತ್ರೀ ಸಮಸ್ಯೆಗಳನ್ನು ಗುರುತಿಸುತ್ತಾ ಸ್ತ್ರೀಪರ ಕಾಳಜಿಯನ್ನು ಪ್ರಕಟಿಸುತ್ತಾರೆ . ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಸ್ತ್ರೀಪರ ಕಾಳಜಿಗಿಂತ ಪುರುಷ ಪ್ರಧಾನ ವ್ಯವಸ್ಥೆಯನ್ನು ಪೋಷಿಸುವಂತೆ ಪಾತ್ರವನ್ನು ಬೆಳೆಸುತ್ತಾ ಸಾಗುತ್ತಾರೆ.

ಸಿಂಗಾರೆವ್ವನ ಬದುಕಿನಲ್ಲಿ ಪ್ರಾರಂಭದಲ್ಲಿ ಲೈಂಗಿಕ ಅನುಭವಗಳು ಆಕೆಯ ವ್ಯಕ್ತಿತ್ವದ ಮೇಲಾಗಲಿ, ಮನಸ್ಸಿನ ಮೇಲಾಗಲಿ ವಿಶೇಷ ಪರಿಣಾಮ ಬೀರುವುದಿಲ್ಲ. ತನ್ನ ದೇಹ ಮತ್ತು ಮನಸ್ಸಿನ ಮೇಲಾಗುವ ದೌರ್ಜನ್ಯವನ್ನು ಆಕೆ ಒಪ್ಪಿಕೊಂಡಂತೆ ಕಂಬಾರರು ಚಿತ್ರಿಸಿದ್ದಾರೆ. ಗಂಡನ ಅಸಡ್ಡೆ, ಅರಮನೆಯ ದುರ್ವ್ಯವಸ್ಥೆ, ಅಪ್ಪನ ದುಷ್ಟತನ ಹಾಗೂ ಇನ್ನೂ ಅನೇಕ ಮಾನಸಿಕ ಒತ್ತಡಗಳಿಂದ ಸಿಂಗಾರೆವ್ವ ತೊಳಲಾಡುತ್ತಿರುವಾಗಲೇ ಅರಮನೆಗೆ ಮರೆಪ್ಪನ ಆಗಮನವಾದದ್ದು ದುರಂತ. ಆತನಿಗೆ ಸಿಂಗಾರೆವ್ವ ಚಿಕ್ಕವಳಿರುವಾಗಲೇ ಆಕರ್ಷಿತಳಾಗಿದ್ದಳು. ಸಿಂಗಾರೆವ್ವ ಯಾವಾಗ ತನ್ನ ದಾಂಪತ್ಯ ಹತಾಶ ಸ್ಥಿತಿಗೆ ತಲುಪುತ್ತದೋ ಆವಾಗ ಗಂಡನ ಮೇಲಿನ ಸಿಟ್ಟಿನಿಂದ ಮಾರೆಪ್ಪನನ್ನು (ಮರ್ಯ) ಹೃತ್ಪೂರ್ವಕವಾಗಿ ಒಪ್ಪಿಕೊಂಡರೂ ಮಾನಸಿಕ ವಿಪ್ಲವಕ್ಕೊಳಗಾಗುವುದನ್ನು ಗಮನಿಸಬಹುದು. "ಈ ಅರಮನಿ ಹಿರೇರಿಗೆಲ್ಲ, ನಾ ಹಾದರಗಿತ್ತಿ ಅಲ್ಲ ಅಂತ ತಿಳಿದಿರಲಿ... ನಿಮ್ಮ ವಂಶದ ಕುಡಿ, ಹಾಹಾ ಮಹಾರಾಜಾ, ಅವನ ಷಂಡತನದಿಂದ ಹಿಂಗೆಲ್ಲ ನಡೀತು ಅಂತ ತಿಳಿದಿರಲಿ ಈ ಅರಮನ್ಯಾಗ ಯಾರಾದ್ರೂ ದೇವರಿದ್ರ ಹಿರೇರ ಆತ್ಮ ಇದ್ರ ಅವರಿಗಿ ನಾನು ಯಾರಂತ ಗೊತ್ತೈತಿ . ನಾ ಹಾದರ ಮಾಡಿದ್ರ ಈ ಅರಮನಿ ಕಂಬದಾಗ ಮಕ್ಕಳ ಅರಳಿಸಲಿಕ್ಕೆ ಅಂತ ತಿಳಿದಿರಲಿ " ನಂತರ ಮರೆಪ್ಪ ಅರಮನೆಯಲ್ಲಿಯೇ ಕಾಯಂ ಜಂಡಾವೂರಿದ. ಮರೆಪ್ಪ, ದೇಸಾಯಿ ಮನೆಯಲ್ಲಿ ಇರುವುದನ್ನು ತಿಳಿದ ಸಿಂಗಾರೆವ್ವನ ತಂದೆ ಪಂಡರಿಗೌಡ ಆತನನ್ನು ಯಾವಾಗ ಹಣಿಯಬೇಕು ಎಂದು ಕಾಯುತ್ತಿರುವಾಗಲೇ ಸಿಂಗಾರೆವ್ವನ ಬಳೆಗಳು ಕಳ್ಳತನವಾಗಿದ್ದು, ಇದನ್ನು ದೇಸಾಯಿಯ ಗಮನಕ್ಕೆ ತಾರದೇ ಉಪಾಯದಿಂದ ಪೊಲೀಸರಿಗೆ ತಿಳಿಸಿ ಮರೆಪ್ಪನನ್ನು ಜೈಲಿಗೆ ಅಟ್ಟಲು ಯತ್ನಿಸಿದ, ಆದರೇ ಇದನ್ನು ಮೊದಲೇ ಅರಿತ ಮರೆಪ್ಪ ಬೇಪತ್ತೆಯಾಗಿ ನಂತರ ಉಪಾಯದಿಂದ ಯಾರಿಗೂ ತಿಳಿಯದ ಹಾಗೆ (ಸಿಂಗಾರೆವ್ವ ಮತ್ತು ಶೀನಿಂಗಿಯನ್ನು ಹೊರತುಪಡಿಸಿ) ಗೌಡನನ್ನೆ ಕೊಂದು ಹಾಕಿದ. ದುಷ್ಟತಂದೆಯ ಸಾವು, ಗಂಡನ ದೂರ್ತತನ ಇವುಗಳಿಂದ ರೋಸಿಹೋದ ಸಿಂಗಾರವ್ವ ಒಂದು ದಿನ ಮರೆಪ್ಪನನ್ನು ಕೂಡಿಬಿಡುತ್ತಾಳೆ. ಗಂಡನ ಮೇಲಿನ

ತಿರಸ್ಕಾರದಿಂದಲೋ, ತನ್ನ ದುರಾದೃಷ್ಟಕ್ಕೋ ಅಥವಾ ಕಟ್ಟೆತುಂಬಿದ ಯೌವ್ವನಕ್ಕೋ ಎನೋ ಮರ್ತ್ಯನೊಂದಿಗೆ ಪೂರ್ಣಸುಖವನ್ನು ಅನುಭವಿಸಿದಳು, ಎಂದೂ ಕಾಣದ ಗೆಲುವನ್ನು ಕಂಡಳು ಹಾಗೂ ಗರ್ಭವತಿಯೂ ಆದಳು.

ಹೀಗೆ ಅಪರಾಧಿ ಪ್ರಜ್ಞೆಯು ಆಕೆಯು ಮಾನಸಿಕ ಸಮತೋಲನವನ್ನು ಕಳೆದುಕೊಳ್ಳುವಷ್ಟು ತೀವ್ರ ಸ್ವರೂಪವನ್ನು ಪಡೆದಿದೆ. ನಿರಪರಾಧಿಯಾಗಿದ್ದೂ ಗಂಡನ ಕೊಲೆಯ ಅಪರಾಧವನ್ನು ತಾನೇ ಒಪ್ಪಿಕೊಳ್ಳುವುದು. ಜೈಲು ಶಿಕ್ಷೆಯನ್ನು ಅನುಭವಿಸುವುದು. ಹೆರಿಗೆ ನಂತರ ಸಾಯುವುದು ಮುಂತಾದ ವರ್ತನೆಗಳು ತನ್ನ ತಪ್ಪಿಗೆ ಶಿಕ್ಷೆ ಎಂದು ಒಪ್ಪಿಕೊಂಡಿದ್ದರ ಸೂಚಕವಾಗಿದೆ.

ಹೆಣ್ಣಿನ ಬದುಕಿನ ಪರಿಪೂರ್ಣತೆ ಆಕೆಯ ತಾಯ್ತನದಲ್ಲಿದೆ. ಎಲ್ಲ ಹೆಂಗಸರೂ ತಾಯ್ತನಕ್ಕಾಗಿ ಹಂಬಲಿಸುತ್ತಾರೆ ಎಂಬುದು ಮತ್ತೊಂದು ಸಿದ್ದ ಮೌಲ್ಯ. ಸಿಂಗಾರೆವ್ವ ಮತ್ತು ಅರಮನೆ ಪಾತ್ರದಲ್ಲಿ ಗುರುತಿಸಬಹುದು. ಭಾರತೀಯ ಸಮಾಜದಲ್ಲಿ ಹೆಣ್ಣು ತಾಯ್ತನದ ಮೂಲಕ ಮೋಕ್ಷ ಹೊಂದಲು ಸಾಧ್ಯ ಎಂಬ ನಂಬಿಕೆ ಇದ್ದು ಇದು ಕೂಡ ಪಿತೃ ಸಂಸ್ಕೃತಿಯ ಚಿಂತನೆಯ ವಿಧಾನವಾಗಿದೆ. ಇಲ್ಲಿ ಗಂಡು ಸಂತಾನಕ್ಕೆ ಮತ್ತು ಗಂಡು ಮಗುವನ್ನು ಹಡೆದವಳಿಗೆ ಇರುವ ಸ್ಥಾನಮಾನ ಹೆಣ್ಣು ಮಗುವಿಗೆ ಮತ್ತು ಹೆಣ್ಣೆತ್ತ ತಾಯಿಗೆ ಇರುವುದಿಲ್ಲ. ಇಂತಹ ಚಿತ್ರದ ಕಾದಂಬರಿಯಲ್ಲಿ ಕಂಡುಬರುತ್ತದೆ.

ಗಂಡ ಎಂತವನೇ ಆದರೂ ಆತ ನಪುಂಸಕನೇ ಆದರೂ ಪಾತಿವ್ರತ್ಯವನ್ನು ಉಳಿಸಿಕೊಳ್ಳಬೇಕು ಎಂಬ ನಿಲುವು ಸಿಂಗಾರೆವ್ವನಲ್ಲಿ ಗಾಢವಾಗಿದೆ. ಸಿಂಗಾರೆವ್ವ ಯಾಕೆ ಮತ್ತು ಯಾವ ಸಂದರ್ಭಗಳಲ್ಲಿ ಮಾರಪ್ಪನೊಂದಿಗೆ ಸಂಬಂಧವನ್ನು ಒಪ್ಪಿಕೊಂಡಳು ಎಂಬುದಕ್ಕೆ ಕಾದಂಬರಿಯು ಬಲವಾದ ಕಾರಣಗಳ ಸರಮಾಲೆಯನ್ನೇ ಸ್ಥಾಪಿಸಿದೆ. ಕಾರಣಗಳಿಲ್ಲದ ಗೃಹಿಣಿ ವೈಯಕ್ತಿಕವಾಗಿ ಸ್ವಇಚ್ಛೆಯಿಂದ ಲೈಂಗಿಕ ಆಸಕ್ತಿಯನ್ನು ಹೊಂದಬಾರದು ಮತ್ತು ಸಂದರ್ಭ ಅಥವಾ ಪುರುಷನ ಇಚ್ಛೆಯ ಮೂಲಕ ಆ ಅನುಭವವನ್ನು ಪಡೆಯಬೇಕು ಎಂಬುದನ್ನು ಕಂಬಾರರು ಪ್ರತಿಪಾದಿಸುವಂತಿದೆ. ಆದ್ದರಿಂದ ಸಿಂಗಾರೆವ್ವ ತಾನು ಮರ್ಯನೊಡನೆ ಹೊಂದಿದ ದೈಹಿಕ ಸಂಬಂಧ ತಪ್ಪು ಎಂದು ಗಂಡನ ಕೊಲೆಯ ಆಪಾದನೆಯನ್ನು ಸಿಂಗಾರೆವ್ವ ಒಪ್ಪಿಕೊಳ್ಳುವಂತೆ ಮತ್ತು ಹೆರಿಗೆಯಲ್ಲಿ ತಾನು ಸಾಯುವಂತೆ ಕಂಬಾರ ಈ ಪಾತ್ರವನ್ನು ಚಿಂತಿಸಿದ್ದಾರೆ.

ಸಿಂಗಾರೆವ್ವ ಜಾಗೃತಾವಸ್ಥೆಯಲ್ಲಿ ತನ್ನ ತಾಯ್ತತನವನ್ನು ಸಮರ್ಥಿಸಿಕೊಂಡು ಅಜಾಗೃತ ಪ್ರಜ್ಞೆಯಲ್ಲಿ ಕೀಳರಿಮೆ, ಅಪರಾಧಿ ಮತ್ತು ಪಶ್ಚಾತಾಪ ಮನೋಭಾವಗಳಿಂದ ನಲುಗುವುದು ಅವಳ ಪಾಲಿನ ವಿಧಿಯೆಂಬಂತೆ ಕಾದಂಬರಿಯಲ್ಲಿ ಮೂಡಿ ಬಂದಿದೆ. ಕಂಬಾರರು ಒಂದು ನೆಲೆಯಲ್ಲಿ ಹೆಣ್ಣನ್ನು ಮಹಾಶಕ್ತಿಯಂತೆ( ಕುಮುದವ್ವ) ಕಂಡರೂ ಕಾದಂಬರಿಯ ಕೊನೆಯಲ್ಲಿ ಸಾಮಾಜಿಕ ಅಮಾನ್ಯವಾದ ಸಂಬಂಧವೊಂದನ್ನು ಅಪೇಕ್ಷಿಸುವಂತಹ ವ್ಯಕ್ತಿ (ಸರಗಂ ದೇಸಾಯಿಯ) ಸಾವಿಗೆ ಮಹಿಳೆ (ಸಿಂಗಾರೆವ್ವ)ಯನ್ನು ಕೇವಲ 'ಕಾರಣ'ವಾಗಿ ನೋಡುವ ಪರಿ ಈ ಎರಡರ ನಡುವೆ ಇರುವ ಕಂದರವನ್ನು ಅರ್ಥ ಮಾಡಿಕೊಳ್ಳುವುದು ಹೇಗೆ?

ಒಮ್ಮೆಯೂ ಸರಗಂ ದೇಸಾಯಿ ತಂದೆ ಪಂಡರೀಗೌಡರಿಗೆ ತಮ್ಮ ತಪ್ಪಿನ ಅರಿವಾಗುವುದೇ ಇಲ್ಲ. ಆ ರೀತಿ ಕಾದಂಬರಿಯಲ್ಲಿ ಚಿತ್ರತವಾಗಿಲ್ಲ. ಇದರಿಂದ ಕಂಬಾರರು ಪುರುಷ ನಿರ್ಮಿತ ಸಮಾಜದಲ್ಲಿ ಸ್ತ್ರೀಯಿಂದ ಯಾವ ಆದರ್ಶಗಳನ್ನು ನಿರೀಕ್ಷಿಸುತ್ತಿದ್ದಾರೆ ಎಂಬುದನ್ನು ತಿಳಿಯಲು ಅಸಾಧ್ಯ.

ಇಲ್ಲಿ ನಾಟಕಕಾರರು ತಾನೆ ಸೃಷ್ಟಿಸಿಕೊಂಡ ಮತ್ತು ತಾನೆ ಪರಿಹರಿಸಿಕೊಳ್ಳಲಾಗದ ಚಪಲಕ್ಕೆ ಬಿದ್ದು ದೇಸಾಯಿ ತನ್ನ ದೌರ್ಬಲ್ಯ ಮತ್ತು ಅತಿರೇಕದಿಂದ ತನ್ನ ಸಾವಿಗೆ ತಾನೇ ಕಾರಣವಾಗುವುದನ್ನು ಕಂಬಾರರು ಹೇಳಬೇಕಾಗಿತ್ತು.ಆವಾಗ ಒಬ್ಬ ವ್ಯಕ್ತಿ ತನ್ನ ವೈಯಕ್ತಿಕ ಕಾರಣಕ್ಕಾಗಿಯೇ ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಹೆಣ್ಣು ಕುಲ ಆ ವ್ಯಕ್ತಿಯನ್ನು ಗೌರವಿಸುತ್ತದೆ ಇದು ಲೇಖಕರಿಗೆ ಸಾಧ್ಯವಾಗದೇ ಹೋಯಿತು ಎನ್ನುವ ಅಂಶವೇ? ಎಂಬುದು ನನ್ನ ಪ್ರಶ್ನೆಯಾಗಿದೆ.

ಹೀಗೆ ಕಾದಂಬರಿಯನ್ನು ಸ್ತ್ರೀ ಪಾತ್ರಗಳ ಮೂಲಕ ಅರ್ಥೈಸ ಹೊರಟಾಗ ಕಂಬಾರರು ಸ್ತ್ರೀಪರ ಕಾಳಜಿಗಿಂತ ಕೃಷಿ ಪ್ರಧಾನ ಮೌಲ್ಯಗಳಾದ ಕ್ಷಮಾಗುಣ, ಪಾತಿವ್ರತ್ಯ, ತಾಯ್ತನದ ತುಡಿತ, ನಿಗೂಢತೆ, ಕಾಮರಹಿತ ಸ್ಥಿತಿ ಮುಂತಾದ ಗುಣಗಳನ್ನು ಸ್ಥಿರೀಕರಿಸುವಂತಿದೆ.

ಸಿಂಗಾರೆವ್ವನ ಜೀವನದಲ್ಲಿ ಅವಳ ವೈಯಕ್ತಿಕತೆಯನ್ನು ಅರ್ಥ ಮಾಡಿಕೊಳ್ಳುವ, ಗೌರವಿಸುವ ಸಂದರ್ಭ ಒದಗಿ ಬರುವುದೇ ಇಲ್ಲ. ಆಕೆಯ ಗಂಡನು ನಪುಂಸಕನಾದರೂ ಆಕೆ ಸಂದರ್ಭ ಮತ್ತು ಮನುಷ್ಯ ಸಮಾಜದ ಅನಿವಾರ್ಯತೆಯನ್ನು ಒಪ್ಪಿಕೊಳ್ಳುವಳು. ಆದರೆ ಗಂಡ ಹೆಂಡತಿಯರ ನಡುವೆ ಇರಬೇಕಾದ ಕನಿಷ್ಟ ಅನಿವಾರ್ಯ ಮತ್ತು ಅವಶ್ಯಕತೆಗಳಾದ ಪರಸ್ಪರ ಅರಿವು, ಸಹಕಾರ, ಪ್ರೀತಿ ಗಂಡನಿಂದ ಸಿಗಲಿಲ್ಲವಾದ್ದರಿಂದ ಸಿಂಗಾರೆವ್ವ ನೈತಿಕತೆಯ ಹೆಸರಿನಲ್ಲಿರುವ ಕೌಟುಂಬಿಕ ಸಂಪ್ರದಾಯವನ್ನು ಕಡೆಗಣಿಸಬೇಕಾಯಿತು.

ಸಿಂಗಾರೆವ್ವಳ ಕಥೆಯನ್ನು ಓದಿದ ಬಳಿಕ ಎಂಥವರಿಗೂ ಕಣ್ಣಂಚಿನಲ್ಲಿ ಒಂದನಿ ನೀರು ಇಳಿಯುವುದಂತೂ ಸಹಜ. ಮತ್ತು ಸಿಂಗಾರೆವ್ವಳ ಬಗ್ಗೆ ಪಾಪ ಎನಿಸದೇ ಇರದು. ಒಟ್ಟಾರೆ ಸಾಂಸ್ಕೃತಿಕ ಸಂದರ್ಭದಲ್ಲಿ ಕೆಲವರ (ಪುರುಷ ಮತ್ತು ಸಂಪ್ರದಾಯವಾದಿಗಳ) ದೃಷ್ಟಿಯಲ್ಲಿ ಸಿಂಗಾರೆವ್ವ ಮತ್ತು ಮರ್‍ಯಾನ ಸಂಬಂಧ ಅನೈತಿಕ, ಅಸಭ್ಯ, ಅಸಹ್ಯ ಎನಿಸ ಬಹುದಾದರೂ ಇವುಗಳನ್ನು ಮೀರಿದ ಮೂಲಭೂತ, ಮಾನವೀಯ ಸಂದರ್ಭದಲ್ಲಿ ಸಹ್ಯ ಸಭ್ಯ ನೈತಿಕವೇ ಆಗಿ ಬಿಡುತ್ತದೆ.

ಪರಾಮರ್ಶನ ಗ್ರಂಥ

ಸಿಂಗಾರೆವ್ವ ಮತ್ತು ಅರಮನೆ – ಡಾ. ಚಂದ್ರಶೇಖರ ಕಂಬಾರ